**ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ**

**ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಃ 215/2022**

ಪಿರ್ಯಾದುದಾರರು : ಕರ್ನಾಟಕ ರಾಜ್ಯ ಪರ ಪೊಲೀಸ್ ಉಪ-ಅಧೀಕ್ಷಕರು,
ಹೊಳೆನರಸೀಪುರ ಉಪ ವಿಭಾಗ, ಹೊಳೆನರಸೀಪುರ.

ವಿರುದ್ಧ

ಆರೋಪಿತರು : ಎ1 ರಾಜೇಶ ಮತ್ತು ಇತರರು

**ದೋಷಾರೋಪಣೆ**

ಶ್ರೀಮತಿ ಎಂ.ಹೆಚ್.ಶಾಂತ., ಎಂ.ಎ, ಎಲ್ ಎಲ್ ಬಿ, ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಹಾಸನ ಆದ ನಾನು, ಆರೋಪಿತರಾದ:

1. ರಾಜೇಶ ಬಿನ್ ರಾಮೇಗೌಡ, 52 ವರ್ಷ,
2. ಸಯ್ಯದ್ ತಾನ್ಜೀಮ್ ಅಃ ತಾನ್ಜೀಮ್ ಬಿನ್ ಸಯ್ಯದ್ ನವಾಬ್ ಜಾನ್,
   29 ವರ್ಷ,ಯರೆಮನ್ನುಗನಳ್ಳಿ, ಚುಂಚನಕಟ್ಟೆ ಹೋಬಳಿ,
   ಕೆ. ಆರ್ .ನಗರ ತಾಃ,
3. ವಾಸು ಅಃ ಶೇಖರ್ ಅಃ ಗುಂಡ ಬಿನ್ ಚಲುವರಾಯಿಗೌಡ,
   33 ವರ್ಷ,
4. ಸುನೀಲ್ ಕುಮಾರ್ ಜಿ.ಆರ್ ಬಿನ್ ರಾಜೇಶ ಜಿ ಆರ್, 30 ವರ್ಷ
5. ಮಂಜೇಗೌಡ.ಜಿ.ಬಿ ಬಿನ್ ಲೇಟ್ ಬೋರೇಗೌಡ, 46 ವರ್ಷ,
6. ಸಾಗರ್ ಗಿ ಗಿ ಬಿನ್ ಗೋವಿಂದೇಗೌಡ, 30 ವರ್ಷ,
7. ರವಿಚಂದ್ರ ಜಿ ಬಿ ಬಿನ್ ಬೋರೇಗೌಡ, 42 ವರ್ಷ

ಎ1, ಎ2 ರಿಂದ ಎ5 ಎಲ್ಲರೂ ಗಂಗೂರು ಗ್ರಾಮ,
ರಾಮನಾಥಪುರ ಹೋಬಳಿ, ಅರಕಲಗೂಡು ತಾಲ್ಲೂಕು.

ನಿಮ್ಮ ವಿರುದ್ದ ಹೊರಿಸುವ ದೋಷಾರೋಪಣೆ ಏನೆಂದರೆಃ-

ಮೊದಲನೆಯದಾಗಿ, ರಾಮನಾಥಪುರ ಹೋಬಳಿ, ಗಂಗೂರು ಗ್ರಾಮದ ಸಮೀಪ ಸವರ್ಣೀಯ ಜನಾಂಗಕ್ಕೆ ಸೇರಿದ 1 ನೇ ಆರೋಪಿರವರ ತೋಟದ ನೇರದಲ್ಲಿ ಹಾದು ಹೋಗಿರುವ ಹಾಸನ-ಪಿರಿಯಾಪಟ್ಟಣ ರಾಜ್ಯ ಹೆದ್ದಾರಿ ರಸ್ತೆಯ ದಕ್ಷಿಣದ ಬದಿಯಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಚಾಸಾ-1 ಮತ್ತು ಚಾಸಾ-1 ರವರ ಮಗ ನಿತಿನ್ ಚಾಸಾ-2 ರವರು ಕಬ್ಬಿನ ಜ್ಯೂಸ್ ಗಾಡಿಯನ್ನು ಹಾಕಿಕೊಂಡು ವ್ಯಾಪಾರ ಮಾಡುವಾಗ

ದಿಃ 27.02.2022 ರಂದು ಬೆಳಿಗ್ಗೆ ಸುಮಾರು 10-50 ಗಂಟೆ ಸಮಯದಲ್ಲಿ ಚಾಸಾ-1 ಮತ್ತು 2 ರವರ ವ್ಯಾಪಾರ ಮಾಡುವಾಗ ಅಲ್ಲಿಗೆ ಬಂದ 1 ಮತ್ತು 2 ನೇ ಆರೋಪಿಗಳು ಚಾಸಾ-1 ಮತ್ತು 2 ರವರು ಪರಿಶಿಷ್ಟ ಜಾತಿಗೆ ಸೇರಿದವರೆಂದು ಗೊತ್ತಿದ್ದರೂ ಸಹ ನಿಮ್ಮ ಅಪ್ಪನ ಜಾಗ ಎಂದು ಕಬ್ಬಿನ ಗಾಡಿಯನ್ನು ಹಾಕಿಕೊಂಡಿದ್ದೀರಾ ಹೊಲೆಯ ಮಾದಿಗರು, ನೀವು ಮಾಡವ ಕಬ್ಬಿನ ಹಾಲನ್ನು ಮೇಲ್ಜಾತಿಯವರಾದ ನಾವೆಲ್ಲರೂ ಕುಡಿಯಬೇಕೆ ಎಂದು ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿರುತ್ತೀರೆಂದು ಪ.ಜಾತಿ / ಪ.ಪಂಗಡ (ತಡೆ) ತಿದ್ದುಪಡಿ ಕಾಯ್ದೆ 2015 ಕಲಂ 3(1)(ಆರ್) ರಡಿಯಲ್ಲಿ ಆರೋಪವಿದ್ದು ನೀವುಗಳು ನನ್ನ ಸಂಜ್ಞಾನದಲ್ಲಿ ಶಿಕ್ಷಾರ್ಹ ಅಪರಾಧವನ್ನೆಸಗಿರುತ್ತೀರಿ ?

ಎರಡನೆಯದಾಗಿ, ಮೇಲೆ ಹೇಳಿದ ದಿನ ಮತ್ತು ಸಂದರ್ಭದಂದು, ಅಪರಾಧವೆಸಗುವ ಏಕೋದ್ದೇಶವುಳ್ಳವರಾಗಿ ಆರೋಪಿಗಳಾದ ನೀವುಗಳು ಅವಾಚ್ಯವಾಗಿ ಬೈದಿರುವುದಲ್ಲದೆ ಚಾಸಾ-1 ಮತ್ತು 2 ರವರಿಗೆ ರವರು ಪ.ಜಾತಿಗೆ ಸೇರಿದವರೆಂದು ತಿಳಿದಿದ್ದರೂ ಸಹಾ ಅವರನ್ನು ಸಾವರ್ಜನಿಕವಾಗಿ ಹೊಲೆಯ ಮಾದಿಗರು ನೀವು ಎಂದು ಅವಾಚ್ಯ ಶಬ್ದಗಳಿಂದ ಬೈದು ಜಾತಿನಿಂದನೆ ಮಾಡಿರುತ್ತೀರೆಂದು ಪ.ಜಾತಿ / ಪ.ಪಂಗಡ (ತಡೆ) ತಿದ್ದುಪಡಿ ಕಾಯ್ದೆ 2015 ಕಲಂ 3(1)(ಎಸ್) ರಡಿಯಲ್ಲಿ ಆರೋಪವಿದ್ದು ನೀವುಗಳು ನನ್ನ ಸಂಜ್ಞಾನದಲ್ಲಿ ಶಿಕ್ಷಾರ್ಹ ಅಪರಾಧವನ್ನೆಸಗಿರುತ್ತೀರಿ ?

ಮೂರನೆಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸಂದರ್ಭದಂದು, ಅಪರಾಧವೆಸಗುವ ಏಕೋದ್ದೇಶವುಳ್ಳವರಾಗಿ ಆರೋಪಿಗಳಾದ ನೀವುಗಳು ಚಾಸಾ-1 ರವರು ಇದು ನಿನ್ನ ಜಾಗ ಆದರೆ ಹೇಳು, ಅದರೂ ಸಹ ನಾನು ಕಬ್ಬಿನ ಗಾಡಿ ಹಾಕಲು ಶುರ ಮಾಡಿದಾಗಿನಿಂದಲೂ ಸಹ ನಿನಗೆ ಪ್ರತಿದಿನ 100 ರೂ ಕೂಡುತ್ತಿದ್ದೇನೆ ಏಕೆ ಜಾತಿ ಹೆಸರಿಡಿದು ಬೈಯುತ್ತೀರಾ ಎಂದುದಕ್ಕೆ 2 ನೇ ಆರೋಪಿ ಈ ಕೀಳು ಜಾತಿಯವನ ಬಳಿ ಏನು ಕೇಳುವುದು ಊರಿನಿಂದ ಇನ್ನೂ ಸ್ವಲ್ಪ ಜನರು ಕರೆದುಕೊಂಡು ಬಂದು ಇವರಿಗೆ ಸರಿಯಾಗಿ ಮಾಡಿಸೋಣ ಎಂದು 1 ಮತ್ತು 2 ನೇ ಆರೋಪಿಗಳು ಜೊತೆ 3 ರಿಂದ 7 ಆರೋಪಿಗಳ ಜೊತೆ ಅಕ್ರಮ ಕೂಟ ಕಟ್ಟಿಕೊಂಡು ಅಪರಾಧವೆಸಗುವ ಏಕೋದ್ದೇಶವುಳ್ಳವರಾಗಿ, ಅಕ್ರಮಕೂಟ ಕಟ್ಟಿಕೊಂಡು ಅದರ ಸದಸ್ಯರಾಗಿರುತ್ತೀರೆಂದು ನಿಮ್ಮಗಳ ಮೇಲೆ ಆರೋಪವಿದ್ದು, ನೀವುಗಳು ಭಾ.ದಂ.ಸಂ. ಕಲಂ 143 ರಡಿಯಲ್ಲಿ ನನ್ನ ಸಂಜ್ಞಾನಲ್ಲಿ ಶಿಕ್ಷಾರ್ಹ ಅಪರಾಧವನ್ನೆಸಗಿರುತ್ತೀರಿ ?

ನಾಲ್ಕನೇಯದಾಗಿ, ಆರೋಪಿಗಳಾದ ನೀವುಗಳು ಅಕ್ರಮಕೂಟ ಕಟ್ಟಿಕೊಂಡು ಅಪರಾಧವೆಸಗುವ ಏಕೋದ್ದೇಶವುಳ್ಳವರಾಗಿ, ಅಕ್ರಮ ಕೂಟದ ಸದಸ್ಯರಾಗಿರುವುದಲ್ಲದೆ ಚಾಸಾ-1 ಮತ್ತು 2 ರವರ ಮೇಲೆ ಜಗಳ ತೆಗೆದು 3 ನೇ ಆರೋಪಿ ಕೈಗಳಿಂದ ಚಾಸಾ-2 ರವರ ಎಡಭಾಗದ ಕೆನ್ನೆಗೆ ಮತ್ತು ತಲೆಯ ಎಡಭಾಗಕ್ಕೆ ಹೊಡೆದಿದ್ದು, 4 ಮತ್ತು 1 ನೇ ಆರೋಪಿ ಚಾಸಾ-1 ರವರಿಗೆ ಕೈಗಳಿಂದ ಬಲಕೆನ್ನೆಗೆ ಮತ್ತ ತಲೆಗೆ ಹೊಡೆದಿದ್ದು, 2 ನೇ ಆರೋಪಿ ಚಾಸಾ-1 ರವರ ಎಡಕೈನ್ನು ಹಿಡಿದು ತಿರುಚಿದ್ದು, 3 ,5 ರಿಂದ 7 ನೇ ಆರೋಪಿಗಳು ಚಾಸಾ-1 ರವರ ಕೊರಳಪಟ್ಟಿ ಹಿಡಿದು ಎಳೆದಾಡಿ ಕೈನಿಂದ ಮೈಕೈಗೆ ಹೊಡೆದು ಚಾಸಾ-1 ಮತ್ತು 2 ರವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದರೆಂದು ನಿಮ್ಮಗಳ ಮೇಲೆ ಆರೋಪವಿದ್ದು, ನೀವುಗಳು ಭಾ.ದಂ.ಸಂ. ಕಲಂ 323 ಸಃವಾ 149 ರಡಿಯಲ್ಲಿ ನನ್ನ ಸಂಜ್ಞಾನಲ್ಲಿ ಶಿಕ್ಷಾರ್ಹ ಅಪರಾಧವನ್ನೆಸಗಿರುತ್ತೀರಿ ?

**ದಿನಾಂಕಃ 17.11.2022**

**(ಎಂ.ಹೆಚ್. ಶಾಂತ),**
**ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಹಾಸನ.**